**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**ಸಿಸಿ ನಂಬರ : 34/2024**

| | | | |
|---|---|---|---|
| ಸಾಕ್ಷಿಯ ಹೆಸರು | : ದಿಲೀಪ್ | ಸಿ.ಡಬ್ಲ್ಯು | 11 |
| ತಂದೆಯ ಹೆಸರು | : ಮಹಲಿಂಗಪ್ಪ | ಪಿ.ಡಬ್ಲ್ಯು | 6 |
| ವಯಸ್ಸು | : 31 ವರ್ಷ | | |
| ಉದ್ಯೋಗ | : ಚಾಲಕ | | |
| ವಾಸ ಸ್ಥಳ | : ತರೀಕೆರೆ. | | |

**ದಿನಾಂಕಃ 10-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>**

ನನಗೆ ಚಾಸಾ-12 ಇವರ ಪರಿಚಯ ಇದೆ. ನನ್ನ ಸಹಿಗಳನ್ನು ನೋಡಿದರೆ ಗುರುತಿಸಬಲ್ಲೆ. ದಿನಾಂಕ 29-11-2023 ರ ಒಂದು ದಾಖಲೆಯನ್ನು ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆ ಪಂಚನಾಮೆ ಆಗಿದ್ದು ಅದನ್ನು ನಿಪಿ.16 ಎಂದು ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಪೊಲೀಸರು ಕಳ್ಳತನದ ವಸ್ತುಗಳನ್ನು ಒಬ್ಬ ವ್ಯಕ್ತಿ ಹಾಜರುಪಡಿಸಿದಾಗ ಅವುಗಳನ್ನು ಅಮಾನತ್ತುಪಡಿಸಿಕೊಳ್ಳಲು ನನ್ನ ಸಹಿ ಪಡೆದಿದ್ದಾರೆ. ಆ ವ್ಯಕ್ತಿ ಎರಡು ಉಂಗುರ ಮತ್ತು ಸ್ವಲ್ಪ ಬೆಳ್ಳಿ ವಸ್ತುಗಳನ್ನು ಹಾಜರುಪಡಿಸಿದ್ದಾನೆ. ನಿಪಿ.8 ರಿಂದ 10 ರಲ್ಲಿ ತೋರಿಸುತ್ತಿರುವ ವಸ್ತುಗಳನ್ನೇ ಅಮಾನತ್ತು ಪಡಿಸಿಕೊಳ್ಳಲಾಗಿದೆ. ಆ ಸಮಯದಲ್ಲಿ ಫೋಟೊಗಳನ್ನು ಕೂಡಾ ತೆಗೆದಿದ್ದಾರೆ ಅವುಗಳನ್ನು ನಿಪಿ.17 ರಿಂದ 20 ಎಂದು ಗುರುತಿಸಲಾಯಿತು.

ಅದೇ ದಿನ ಜರುಗಿಸಲಾದ ಇನ್ನೊಂದು ಪಂಚನಾಮೆಗೆ ಕೂಡಾ ಸಹಿ ಮಾಡಿದ್ದೇನೆ ಅದನ್ನು ಆರೋಪಿಯು ಕಳ್ಳತನ ಮಾರಾಟ ಮಾಡಿದ ಸ್ಥಳದಲ್ಲಿ ಅಂದರೆ ಭದ್ರಾವತಿ ಎಪಿಎಂಸಿಯಲ್ಲಿ ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ನಿಪಿ.21 ಮತ್ತು ಫೋಟೊವನ್ನು ನಿಪಿ.22 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.21 ಎ ಎಂದು ಗುರುತಿಸಲಾಯಿತು. ಕಳ್ಳತನ ಮಾಡಿದ ವ್ಯಕ್ತಿಯೇ ಸ್ಥಳವನ್ನು ತೋರಿಸಿದ್ದಾರೆ ಮತ್ತು ಫೋಟೊದಲ್ಲಿ ಆತನು ಇದ್ದಾನೆ. ಫೋಟೊದಲ್ಲಿ ಇರುವ ಆರೋಪಿಯನ್ನು ( ನಿಪಿ.18 ರಿಂದ 20) ನೋಡಿ ಸಾಕ್ಷಿಯು ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ನಾನು ತರೀಕೆರೆಯ ಕೆಇಬಿ ಹತ್ತಿರ ವಾಸ ಮಾಡುತ್ತೇನೆ. ನಾನು ಠಾಣೆಗ ಹೋಗಿದ್ದೇನೆ ಎನ್ನಲಾಗುವ ದಿನಾಂಕ ಮತ್ತು ಸಮಯ ಖಚಿತವಾಗಿ ಹೇಳಲು ಬರುವುದಿಲ್ಲ. ಪಂಚನಾಮೆ ಮಾಡಲು ಬರುವಂತೆ ಪೊಲೀಸರು ನನಗೆ ನೋಟಿಸ್ಸು ಕೊಟ್ಟಿಲ್ಲ.ಪಂಚನಾಮೆಗೆ ಓದಿ ಸಹಿ ಮಾಡಿದ್ದೇನೆ ಈಗ ನೆನಪಿಲ್ಲ ಆದರೆ ಪೊಲೀಸರು ರಿಕವರಿ ಮಾಡುತ್ತಿಕೊಳ್ಳುತ್ತಿದ್ದೇವೆ ಎಂದು ಹೇಳಿರುವುದು ನೆನಪಿದೆ. ಒಬ್ಬ ವ್ಯಕ್ತಿ ತಂದು ಹಾಜರುಪಡಿಸಿದ

ವಸ್ತುಗಳನ್ನು ಪೊಲೀಸರು ಅಮಾನತ್ತು ಮಾಡಿಕೊಂಡಿದ್ದಾರೆ ಅದನ್ನು ಯಾರಿಂದ ಮತ್ತು ಎಲ್ಲಿಂದ ವಶಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ವ್ಯಕ್ತಿಯನ್ನು ನಾನು ಮೊದಲು ನೋಡಿಲ್ಲ ಮತ್ತು ಅವರ ಪರಿಚಯ ನನಗೆ ಇಲ್ಲ. ಚಾಸಾ-1 ನನಗ ಪರಿಚಯದ ವ್ಯಕ್ತಿ ಇರುತ್ತಾರೆ ಎಂದರೆ ಸರಿ. ಅವರು ಹೇಳಿದ ಕಾರಣ ಅವರು ಹೇಳಿದ ಸ್ಥಳಗಳಲ್ಲಿ ಮತ್ತು ದಾಖಲೆ ಗಳಿಗೆ ಸಹಿ ಮಾಡಿದ್ದೇನೆ ಎಂದರ ಸರಿ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಭದ್ರಾವತಿಯಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ಫೋಟೊ ತೆಗೆದಿಲ್ಲ ಅದನ್ನು ಕೂಡಾ ತರೀಕೆರೆ ಪೊಲೀಸ್ ಠಾಣೆಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ಪೊಲೀಸರು ಮತ್ತು ಚಾಸಾ-1 ರವರ ಹೇಳಿಕೆಯ ಮೇರೆಗೆ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲವೆಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ**
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**